# ಹೆಣ್ತನ ಕಾಪಾಡುವ ಸ್ತನ ಸಂರಕ್ಷಣೆ ಶಸ್ತ್ರಚಿಕಿತ್ಸೆ

**ಭಾ**ರತದಲ್ಲಿ ಹೊಸದಾಗಿ ಸ್ತನ ಕ್ಯಾನ್ಸರ್ ತುತ್ತಾಗುವವರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. 2010ರಲ್ಲಿ 1 ಒಂದು ಲಕ್ಷ ಮಂದಿ ಹೊಸದಾಗಿ ಸೇರ್ಪಡೆಯಾಗಿದ್ದರೆ, 2020ರಲ್ಲಿ ಇದು 1.25 ಲಕ್ಷಕ್ಕೆ ಏರಿಕೆಯಾಗುವ ನಿರೀಕ್ಷೆ ಇದೆ ಎಂದು ಭಾರತೀಯ ವೈದ್ಯಕೀಯ ಮಂಡಳಿಯ ರಾಷ್ಟ್ರೀಯ ಕ್ಯಾನ್ಸರ್ ರಿಜಿಸ್ಟ್ರಿ ಕಾರ್ಯಕ್ರಮದಲ್ಲಿ ಈ ಅಂಕಿ– ಅಂಶಗಳನ್ನು ದೃಢಪಡಿಸಿದೆ. ಸಂಖ್ಯೆಗಳಲ್ಲಿನ ಈ ಏರಿಕೆ ಆತಂಕಕ್ಕೆ ಕಾರಣವಾಗಿದೆ. ಆದರೂ, ಲಭ್ಯವಿರುವ ಅತ್ಯಾಧುನಿಕ ಚಿಕಿತ್ಸಾ ವಿಧಾನಗಳು ಸ್ತನ ಕ್ಯಾನ್ಸರ್ ಅನ್ನು ನಿವಾರಿಸಲು ಸಹಕಾರಿಯಾಗಿರುವುದು ಭರವಸೆಯ ಆಶಾಕಿರಣವಾಗಿದೆ.

ಕ್ಯಾನ್ಸರ್ ಎಂದಾಕ್ಷಣ ಎಂತಹವರೂ ಭಯಪಡುತ್ತಾರೆ. ಅದರಲ್ಲೂ ಸ್ತನ ಕ್ಯಾನ್ಸರ್ ಎಂದರೆ ಮಹಿಳೆಯರು ಬೆಚ್ಚಿಬೀಳುತ್ತಾರೆ. ಹೆಣ್ಣುತನದ ಸಂಕೇತಗಳನ್ನು ಕಳೆದುಕೊಳ್ಳುವುದನ್ನು ಯಾರೂ ಬಯಸಲಾರರು. ಇತ್ತೀಚಿನ ದಿನಗಳಲ್ಲಿ ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವವರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ಆದರೂ, ಇತ್ತೀಚಿನ ದಿನಗಳಲ್ಲಿ ಲಭ್ಯವಿರುವ ಆಧುನಿಕ ತಂತ್ರಜ್ಞಾನ ಆಧಾರಿತ ಚಿಕಿತ್ಸಾ ವಿಧಾನಗಳಿಂದ ಅದರಿಂದ ಪಾರಾಗುತ್ತಿರುವವರ ಸಂಖ್ಯೆಯಲ್ಲೂ ಏರಿಕೆಯಾಗುತ್ತಿದೆ.

ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಹಿಳಾ ರೋಗಿಗೆ ಅವರ ಸ್ತನಗಳನ್ನು ಕತ್ತರಿಸಿ ತೆಗೆದುಹಾಕಬೇಕು ಎನ್ನುವ ಗಾಳಿಮಾತಿದೆ. ಇದು ತಪ್ಪು ಕಲ್ಪನೆ. ಸ್ತನಗಳನ್ನು ಉಳಿಸಿಕೊಳ್ಳುವಂತಹ ಶಸ್ತ್ರಚಿಕಿತ್ಸಾ ವಿಧಾನ ಹೆಚ್ಚು ಜನಪ್ರಿಯವಾಗುತ್ತಿದೆ. ಇದರಿಂದ ಗುಣಮುಖರಾಗುವ ರೋಗಿಗಳಿಗೆ ಮುಂದಿನ ದಿನಗಳಲ್ಲಿ ಯಾವುದೇ ಅಂಗದ ನ್ಯೂನ್ಯತೆ ಇಲ್ಲದೆ ದೈಹಿಕವಾಗಿ ಮತ್ತು ಸಾಮಾಜಿಕವಾಗಿ ಉತ್ತಮ ಜೀವನ ನಡೆಸಲು ಸಹಕಾರಿಯಾಗುತ್ತದೆ. ಇದರಿಂದಾಗಿ ಮಹಿಳೆಯರು ಹೆಣ್ಣುತನದ ಸಂಕೇತಗಳನ್ನು ಕಳೆದುಕೊಳ್ಳದೇ ಅವುಗಳನ್ನು ಉಳಿಸಿಕೊಳ್ಳುವಂತಹ ಮುಂದುವರಿದ ಚಿಕಿತ್ಸಾ ವಿಧಾನಗಳು ಲಭ್ಯವಿದೆ.



**ಡಾ॥ ಜಯಂತಿ ತುಮ್ಸಿ**
ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು
ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್

**ಭಾರತದಲ್ಲಿ ಪ್ರತಿ ವರ್ಷವೂ ಸುಮಾರು ಒಂದು ಲಕ್ಷ ಮಹಿಳೆಯರು ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವವರ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗುತ್ತಿದ್ದಾರೆ. ಈ ಪ್ರಮಾಣವು ಮಹಾನಗರಗಳಲ್ಲಿ ವೇಗವಾಗಿ ಏರುತ್ತಿರುವುದು ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ಈ ಬಗೆಯ ಕ್ಯಾನ್ಸರ್‌ನಿಂದಾಗಿ ಅವರ ಜೀವನ ಶೈಲಿಯನ್ನೇ ಬದಲಿಸುವ ಸ್ತನಗಳನ್ನು ವಿರೂಪಗೊಳಿಸಿಸುವುದಕ್ಕಿಂತಲೂ ಅವುಗಳನ್ನು ಸಂರಕ್ಷಿಸಿಕೊಳ್ಳುವ ಶಸ್ತ್ರಚಿಕಿತ್ಸೆಗಳು ಜನಪ್ರಿಯವಾಗುತ್ತಿವೆ.**

ಸ್ತನ ಕ್ಯಾನರ್ ಚಿಕಿತ್ಸೆಯಲ್ಲಿ ಅವರ ಮುಂದಿನ ಜೀವನಕ್ಕೆ ಅಡ್ಡಿಯಾಗದ ರೀತಿಯಲ್ಲಿ ಅವರ ಅಂಗಾಂಗಳನ್ನು ಸಂರಕ್ಷಿಸಿಕೊಂಡು ಚಿಕಿತ್ಸೆ ನೀಡುವ ವಿಧಾನ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ. 'ಅಂಗ ಸಂರಕ್ಷಣಾ ಚಿಕಿತ್ಸಾ' ವಿಧಾನ ಇಂದಿನ ದಿನಗಳಲ್ಲಿ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ, ಬಹುತೇಕ ರೋಗಿಗಳು ಈ ವಿಧಾನಕ್ಕೆ ಮೊರೆ ಹೋಗುತ್ತಿದ್ದಾರೆ.

ಈ ವಿಧಾನದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಬಳಿಕ ವಿಕಿರಣ ಚಿಕಿತ್ಸೆಯನ್ನು ನೀಡಲಾಗುತ್ತದೆ. ಆದರೆ, ಕೆಲವು ಮಹಿಳೆಯರಲ್ಲಿ ಶಸ್ತ್ರಚಿಕಿತ್ಸೆ ಬಳಿಕ ವಿಕಿರಣ ಚಿಕಿತ್ಸೆಯನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಅಂತಹವರಿಗೆ ವಿಕಿರಣ ಚಿಕಿತ್ಸೆಯನ್ನು ನೀಡಲಾಗುವುದಿಲ್ಲ.

ಈ ಬಗೆಯ ಶಸ್ತ್ರಚಿಕಿತ್ಸೆಯನ್ನು ಸಾಮಾನ್ಯವಾಗಿ ಪತ್ತೆಯಾಗುವ ಎಲ್ಲಾ ಬಗೆಯ ಸಣ್ಣ ಪ್ರಮಾಣದ ಕ್ಯಾನ್ಸರ್ ಗಡ್ಡೆಗಳಿಗೆ ನೀಡಲಾಗುತ್ತದೆ. ಅಂಗ ಸಂರಕ್ಷಣಾ ಚಿಕಿತ್ಸೆಯನ್ನು ಸ್ತನಗಳನ್ನು ಉಳಿಸಿಕೊಳ್ಳುವ ಸಲುವಾಗಿ ಮಾಡಲಾಗುತ್ತದೆ. ಆದರೂ, ಕೆಲವೊಂದು ಸಂದರ್ಭಗಳಲ್ಲಿ ಸಂಪೂರ್ಣವಾಗಿ ಸ್ತನಗಳನ್ನು ತೆಗೆದುಹಾಕುವುದು ಅನಿವಾರ್ಯವಾಗಿರುತ್ತದೆ. ಇಂತಹವರಿಗೆ ಅಂಗಸಂರಕ್ಷಣಾ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುವುದಿಲ್ಲ. ಬದಲಿಗೆ ಶಸ್ತ್ರಚಿಕಿತ್ಸೆಯ ಮೂಲಕ ಕೃತಕ ಸ್ತನಗಳನ್ನು ಮರುಸೃಷ್ಟಿಸುವ ವಿಧಾನ ಲಭ್ಯವಿದೆ.

ಸ್ತನಗಳನ್ನು ಸಂಪೂರ್ಣವಾಗಿ ತೆಗೆಯಿಸಿಕೊಂಡ ರೋಗಿಗಳಿಗೆ ಸೂಕ್ತವಾದ ಕೃತಕ ಸ್ತನಗಳನ್ನು ತಕ್ಷಣವೇ ಜೋಡಿಸಲು ಪುನರ್ ನಿರ್ಮಾಣದ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತದೆ. ಮೂಲ ಸ್ತನದ ರೀತಿಯಲ್ಲೇ ಅದರ, ಆಕಾರ ಮತ್ತು ಗಾತ್ರಕ್ಕೆ ಅನುಗುಣವಾಗಿ ಕೃತಕ ಸ್ತನಗಳನ್ನು ರೂಪಿಸಲಾಗುತ್ತದೆ. ಸಾಮಾನ್ಯವಾಗಿ ಇಂತಹ ಪುನರ್ ನಿರ್ಮಾಣ ಶಸ್ತ್ರಚಿಕಿತ್ಸೆಯಲ್ಲಿ ಇಂಪ್ಲಾಂಟ್ ಆಧಾರಿತ ಇಲ್ಲವೆ ಆಟೋಲೋಗಸ್ (ರೋಗಿಗಳ ಅಂಗಾಂಶ ಬಳಸಿ) ವಿಧಾನದಲ್ಲಿ ರೂಪಿಸಲಾಗಿರುತ್ತದೆ.

ಸ್ತನ ಕ್ಯಾನ್ಸರ್‌ಗೆ ಒಳಗಾಗಿ, ಅದಕ್ಕಾಗಿ ಚಿಕಿತ್ಸೆ ಪಡೆದುಕೊಂಡಿದ್ದನ್ನು ನೆನಪಿಸಿ ಕೊಳ್ಳುವುದಕ್ಕಿಂತಲೂ ಮುಂದಿನ ದಿನಗಳತ್ತ ನೋಡುವುದು ಒಳಿತು. ಕ್ಯಾನ್ಸರ್‌ನಿಂದ ಗುಣಮುಖರಾಗಿ ಉತ್ತಮ ಜೀವನ ನಡೆಸಲು ಸಾಧ್ಯ ಎನ್ನುವುದನ್ನು ತೋರಿಸಿಕೊಡಬೇಕು. ಹೆಣ್ಣುತನವನ್ನು ಕಾಪಾಡಿಕೊಳ್ಳುತ್ತಲೇ ಕ್ಯಾನ್ಸರ್ ಅನ್ನು ಗೆದ್ದು ಬಂದ ಸ್ಫೂರ್ತಿ ಇತರರಿಗೂ ಮಾದರಿಯಾಗಿರಲಿ.



**53 ವರ್ಷದ ಕಮಲ್‌ದೀಪ್‌ರ ಸ್ತನದಲ್ಲಿ ಸಣ್ಣ ಗಂಟುಗಳಿದ್ದುದರಿಂದ ಹೆಚ್ಚಿನ ಪರೀಕ್ಷೆಗಾಗಿ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್‌ಗೆ ಬಂದಿದ್ದರು. ವೈದ್ಯಕೀಯ ಪರೀಕ್ಷೆಯಲ್ಲಿ ಸ್ತನದಲ್ಲಿ 2 ಕ್ಯಾನ್ಸರ್ ಗೆಡ್ಡೆಗಳಿರುವುದು ಖಚಿತವಾಗಿತ್ತು. ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್‌ನ ಪರಿಣತರ ತಂಡವು ಅವರ ವೈಯಕ್ತಿಕ ಅಗತ್ಯಾನುಸಾರ ಮೂರು ಹಂತದ ಚಿಕಿತ್ಸೆ ನೀಡಿತ್ತು. ಕೀಮೊಥೆರಪಿ ಮತ್ತು ಸ್ತನ ಸಂರಕ್ಷಣೆಯ ಶಸ್ತ್ರಚಿಕಿತ್ಸೆಗೆ ಒಳಗಾದರು. ಜೊತೆಗೆ ಟ್ರೂಬೀಮ್ ಎಸ್‌ಟಿಎಕ್ಸ್ ರೇಡಿಯೋಥೆರಪಿ ಪಡೆದುಕೊಂಡರು. ಇವೆಲ್ಲದರ ಫಲ ಅವರ ಮೊಗದಲ್ಲಿ ನಗುವಾಗಿ ಅರಳಿದೆ. ಮನೆ ಮತ್ತು ಕಚೇರಿ ಕೆಲಸವೆರಡನ್ನೂ ಮತ್ತೆ ಸಂತೋಷದಿಂದ ಸರಿದೂಗಿಸಿಕೊಂಡು ಹೋಗುತ್ತಿದ್ದಾರೆ. ಕ್ಯಾನ್ಸರ್‌ನಿಂದ ಉಪಶಮನ ಪಡೆದ ಸಂತಸ ಅವರಲ್ಲಿದೆ.**

080 - 30 44 44 44 | infogh@globalhospitalsindia.com | globalhospitalsindia.com